ಮುಖ–ಮೈ ಸುಟ್ಟುಕೊಂಡ ಹುಡುಗಿ ನಮಗೆ ಬೇಡ. ನಮ್ಮ ಒಬ್ಬನೇ ಮಗನಿಗೆ ಬೇಕಷ್ಟು ಹುಡುಗಿಯರು ಸಿಗುತ್ತಾರೆ. ನಿಮ್ಮ ಹುಡುಗಿಯ ಚಂದಕ್ಕೇ ಮೆಚ್ಚಿದ್ದ. ಹಾಗಾಗೇ ನಾವಾಗಿ ಕೇಳಿಕೊಂಡು ಬಂದದ್ದು. ಈಗ ಸುಟ್ಟ ಮುಖದವಳನ್ನು ಅವನು ಖಂಡಿತ ಒಪ್ಪುವದಿಲ್ಲ...''

ಶಾಹೆನಾಳ ಉಮ್ಮ ಸೆರಗಲ್ಲಿ ಮುಖ ಮುಚ್ಚಿಕೊಂಡು ಬಿಕ್ಕಿದರು. ಶಾಹೆನಾ ಮಾತ್ರ ಮೌನವಾಗಿ ಎದ್ದು ಹೋದಳು.

ರೂಪವೊಂದೇ ಮನುಷ್ಯ ಸಂಬಂಧಗಳನ್ನು ಬೆಸೆಯುವುದೇ? ಹೃದಯದ ಭಾವನೆಗಳು, ಆತ್ಮ ಮನಸ್ಸು ಎಲ್ಲ ಜಡವೇ... ಅವುಗಳಿಗೇನೂ ಬೆಲೆಯೇ ಇಲ್ಲವೇ? ಹಾಗಿದ್ದರೆ ತನ್ನನ್ನು ಮನಸಾರೆ ಮೆಚ್ಚಿದವ, ತನ್ನ ಸುಟ್ಟ ಗಾಯಗಳಿಗಾಗಿ ತನ್ನನ್ನು ಮನದಿಂದ ಕಿತ್ತೆಸೆದುಬಿಟ್ಟನೇ? ಅದು ಅಷ್ಟು ಸುಲಭವೇ?

ಭವಿಷ್ಯದ ಅಂಧಕಾರ ನೆನೆದು ನಡುಗಿದಳು.

★★★

ಎಲ್ಲರ ಮೂಕ ಪ್ರಾರ್ಥನೆಗಳು ಫಲ ಕೊಟ್ಟವೋ, ಅಲ್ಲಾಹು ಕಣ್ತೆರೆದನೋ ಎಂಬಂತೆ ಮತ್ತೆಂಟೇ ದಿನಗಳಲ್ಲಿ ಅನ್ವರ ಶಾಹೆನಾಳ ಕೈಯನ್ನು ಬೇಡಿದ್ದ.

ಶಾಹೆನಾಳ ಅಬ್ಬಾ ಗದ್ಗದರಾಗಿ ಹೇಳಿದ್ದರು.

''ಈಗಾಗಲೇ ನಿಶ್ಚಯಗೊಂಡಿದ್ದ ಮದುವೆ ಅವಳು ಸುಟ್ಟುಕೊಂಡಿದ್ದರಿಂದ ಮುರಿದು ಹೋಯಿತು. ಬೇಟೇ ನೀನು ಯೋಚಿಸಿ, ನೋಡಿ, ನಿರ್ಧಾರಕ್ಕೆ ಬಾ. ಆದರೆ ಇಷ್ಟು ಮಾತ್ರ ಹೇಳಬಲ್ಲೆ ಬೇಟೇ, ನಮ್ಮ ಶಾಹೆನಾ ಚಿನ್ನದಂಥ ಹುಡುಗಿ... ಅವಳ ಹೃದಯಕ್ಕೆ ಯಾವ ಕಲೆಯೂ ಇಲ್ಲ...''

ಆದರೆ ಅನ್ವರ ನಿರ್ಧಾರದ ಕಂಠದಲ್ಲಿ ನೇರ ಹೇಳಿಬಿಟ್ಟಿದ್ದ.

''ನಾನವಳನ್ನು ನೋಡಿದ್ದೇನೆ. ಮದುವೆ ಮುರಿದದ್ದೂ ನನಗೆ ತಿಳಿದಿದೆ. ನಾನೇನೂ ಸಹಾನುಭೂತಿಯಿಂದ ಈ ಮದುವೆ ಮಾಡಿಕೊಳ್ಳುತ್ತಿಲ್ಲ. ಅವಳ ಮುಖ ಸುಟ್ಟರೂ, ಮೈ ಚರ್ಮ ವಿಕಾರವಾದರೂ ನಾನವಳನ್ನು ಇಷ್ಟಪಟ್ಟಿದ್ದೇನೆ. ಜೀವನದುದ್ದ ಚೆನ್ನಾಗಿ ನೋಡಿಕೊಳ್ಳುತ್ತೇನೆಂಬ ಭರವಸೆ ಕೊಡುತ್ತೇನೆ. ನಿಶ್ಚಯಿಸಿದ ಮುಹೂರ್ತದಲ್ಲೇ ಮದುವೆ ನಡೆಸಿ ಕೊಡಿ.''

ಮನೆಯಲ್ಲಿ ಎಲ್ಲ ದಂಗಾಗಿ ಹೋಗಿದ್ದರು. ''ಅಲ್ಲಾಹು ಪರಮ ಕರುಣಾಳು. ಆತನೆಂದೂ ಕೈ ಬಿಡಲಾರ...'' ಶಾಹೆನಾಳ ಅಜ್ಜಿ ಬಾರಿ ಬಾರಿ ಹೇಳುವಾಗ ಉಮ್ಮ ಕೂಡ ಹರುಷದಿಂದ ನಕ್ಕರೆ, ಶಾಹೆನಾ ಕನಸೋ ವಾಸ್ತವವೋ ಅರಿಯಲಾಗದೇ ಕಕ್ಕಾಬಿಕ್ಕಿಯಾಗಿದ್ದಳು.

ಅನ್ವರ ಅವಳ ಹೃದಯದಲ್ಲಿ ಬಹಳ ಎತ್ತರಕ್ಕೇರಿದ್ದ. ಅಂಥ ಗಂಡಸಿಗೆ ಪತ್ನಿಯಾಗುವ ಸೌಭಾಗ್ಯ ದೊರೆತದ್ದಕ್ಕೆ ಅವಳು ಧನ್ಯತೆಯಿಂದ ಬೀಗಿದಳು.

ಅನ್ವರ, ತೀರಾ ಶ್ರೀಮಂತನಲ್ಲದಿದ್ದರೂ ಪೇಟೆಯಲ್ಲಿ ದೊಡ್ಡ ಪಾತ್ರೆ ಅಂಗಡಿಯನ್ನು ನಡೆಸುತ್ತಿದ್ದ. ಸಾಕಷ್ಟು ತೋಟವೂ ಇತ್ತು. ತಂದೆ ತಾಯಿ ಯಾರೂ ಇಲ್ಲದ ಅನ್ವರನ ಇಬ್ಬರು ಸಹೋದರಿಯರೂ ವಿದೇಶದಲ್ಲಿ ನೆಲೆಸಿದ್ದರು.

ಮದುವೆಯೂ ನಡೆದು ಹೋಗಿ ಶಾಹೆನಾ ಅನ್ವರನ ಬದುಕನ್ನು ತುಂಬಿದಳು.

ಸಜೀದನೂ ತಂಗಿಯ ಹರುಷ ದಾಂಪತ್ಯ ಜೀವನ ಕಂಡು ಸಂತೃಪ್ತ ಮನದಿಂದ ಹಿಂದಿರುಗಿದ.

ಶಾಹೆನಾ ಅನ್ವರನ ಪ್ರೀತಿಯಲ್ಲಿ ನಳನಳಿಸಿದಳು.

★★★

ಎಲ್ಲವೂ ಸರಿಗೊಂಡಿತು... ಎನ್ನುವಾಗಲೇ ಶಾಹೆನಾ ಗಮನಿಸಿದ್ದು.

ಅನ್ವರ ತನ್ನಿಂದ ವಿಮುಖನಾಗುತ್ತಿದ್ದಾನೆ!